/

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/77/2015-16. ದಿನಾಂಕ:27-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಬಸಮ್ಮ ಗಂಡ ಲೇಟ್ ಸಣ್ಣ ಸಿದ್ದಪ್ಪ<br>2)ಅಂಜಿನಮ್ಮ ಗಂಡ ಲೇಟ್ ಸಣ್ಣ ಮಲಿಯಪ್ಪ<br>3)ಕ್ಯಾರಕಟ್ಟೆಪ್ಪ ತಂದೆ ಲೇಟ್ ಗುರುವಪ್ಪ<br>ಗಂಗಮ್ಮನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 71ಎ. ವಿಸ್ತೀರ್ಣ 3-25. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 71ಎ. ವಿಸ್ತೀರ್ಣ 3-25. ಎಕ್ರೆ ಜಮೀನನ್ನು ಸದರಿ ತಾಲೂಕು ಗಂಗಮ್ಮನಹಳ್ಳಿ ಗ್ರಾಮದ ಕ್ಯಾರಕಟ್ಟೆಪ್ಪ ತಂದೆ ಲೇಟ್ ಗುರುವಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸುಂಕದಕಲ್ಲು ಇವರು ನಮೂನೆ-21 ನೋಟಿಸನ್ನು ದಿನಾಂಕ 14-01-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರು ವಂಶವೃಕ್ಷದಲ್ಲಿನ ಮರಣ ಹೊಂದಿದವರ ಮರಣ ದೃಡಿಕರಣ ಪತ್ರ ಲಗತ್ತಿಸಿಲ್ಲದ ಕಾರಣ ಹಾಗೂ ಮುಟೇಷನ್ ಪ್ರತಿ ಹಾಗೂ ಹಳೆ ಪಹಣಿಗಳನ್ನು ಲಗತ್ತಿಸಿಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 15/2014-15. ದಿನಾಂಕ 15-02-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 01-12-2015 ರಿಂದ 27-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಸುಂಕದಕಲ್ಲು ಗ್ರಾಮದ ಸನಂ 71ಎ. ವಿಸ್ತೀರ್ಣ 3-25. ಎಕ್ರೆ ಜಮೀನನ್ನು ನಮ್ಮ ಒಂದನೇ ಅಣ್ಣನಾದ ಮಲಿಯಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ಅವಿವಾಹಿತರಾಗಿರುತ್ತಾರೆ. ಇವರು ದಿನಾಂಕ 10-08-1987 ರಂದು ಹಾಗೂ ಎರಡನೇ ಅಣ್ಣನಾದ ಸಣ್ಣ ಸಿದ್ದಪ್ಪ ಇವರು ದಿನಾಂಕ 04-06-1988 ರಂದು ಹಾಗೂ ಮೂರನೇ ಅಣ್ಣನಾದ ಸಣ್ಣ ಮಲಿಯಪ್ಪ ಇವರು ದಿನಾಂಕ 09-11-1988 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ವಂಶವೃಕ್ಷವನ್ನು ಸಲ್ಲಿಸಿರುವುದರಿಂದ ಅವರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 71ಎ. ವಿಸ್ತೀರ್ಣ 3-25. ಎಕ್ರೆ ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಬಸಮ್ಮ ಗಂಡ ಲೇಟ್ ಸಣ್ಣ ಸಿದ್ದಪ್ಪ. ಅಂಜಿನಮ್ಮ ಗಂಡ ಲೇಟ್ ಸಣ್ಣ ಮಲಿಯಪ್ಪ. ಕ್ಯಾರಕಟ್ಟೆಪ್ಪ ತಂದೆ ಲೇಟ್ ಗುರುವಪ್ಪ ಗಂಗಮ್ಮನಹಳ್ಳಿ ಗ್ರಾಮ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಬಸಮ್ಮ ಗಂಡ ಲೇಟ್ ಸಣ್ಣ ಸಿದ್ದಪ್ಪ. ಅಂಜಿನಮ್ಮ ಗಂಡ ಲೇಟ್ ಸಣ್ಣ ಮಲಿಯಪ್ಪ. ಕ್ಯಾರಕಟ್ಟೆಪ್ಪ ತಂದೆ ಲೇಟ್ ಗುರುವಪ್ಪ. ಗಂಗಮ್ಮನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.